ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

SC. 29/2018

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ः | ನೀಲಮ್ಮ | ಪಿ.ಡಬ್ಲ್ಯೂ. | 1 |
| ಗಂಡನ ಹೆಸರು | ः | ನಂದಗೋಪಾಲ್ | ಸಿ.ಡಬ್ಲ್ಯೂ. | 1 |
| ವಯಸ್ಸು | ः | 55 ವರ್ಷ | | |
| ಉದ್ಯೋಗ | ः | ಕೂಲಿ ಕೆಲಸ | | |
| ವಾಸ ಸ್ಥಳ | ः | ಬೇತೂರ ರಸ್ತೆ, ದಾವಣಗೆರೆ. | | |

ದಿ.26.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ** ः

**1.** ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನಂ.2 ಮತ್ತು 3 ನನಗೆ ಗೊತ್ತು. ತಲೆಮರಿಸಿಕೊಂಡ ಆರೋಪಿ ನಂ.1 ಮಣಿ ಸಹ ನನಗೆ ಗೊತ್ತು. ಚಾಸಾ-2 ನನ್ನ ಮಗಳು. ಈಗ್ಯೆ 6 ವರ್ಷಗಳ ಹಿಂದೆ ನಾನು ನನ್ನ ದೊಡ್ಡ ಮಗಳು ಪುನಿತಾಳನ್ನು ಹೆರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದೆ. ನನ್ನ ಇನ್ನೊಬ್ಬ ಮಗಳು ವನಿತಾ ಮನೆಯಲ್ಲಿ ಇದ್ದಳು. ಆಸ್ಪತ್ರೆಯಿಂದ ರಾತ್ರಿ 09.30 ಗಂಟೆಗೆ ವಾಪಸ್ ಮನೆಗೆ ಬಂದೆವು. ಆಗ ವನಿತಾ ಮನೆಯಲ್ಲಿ ಇರಲಿಲ್ಲ. ನಂತರ ಅಕ್ಕ-ಪಕ್ಕ ವಿಚಾರಿಸಿದೆವು ಅವರು ಆರೋಪಿತರು ನನ್ನ ಮಗಳನ್ನು ಕರೆದುಕೊಂಡು ಹೋಗಿದ್ದಾರೆಂದು ತಿಳಿಸಿದರು. ಈ ವಿಚಾರವಾಗಿ ನಾನು ಪೋಲೀಸರಿಗೆ ಫಿರ್ಯಾದನ್ನು ಕೊಟ್ಟಿರುತ್ತೇನೆ. ಫಿರ್ಯಾದಿಯನ್ನು **ನಿಪಿ.1** ಎಂದು, ನಿಪಿ.1 ರಲ್ಲಿ ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು.

**2.** ನಾನು ಫಿರ್ಯಾದು ಕೊಟ್ಟ ನಂತರ ಪೋಲೀಸರು ನಮ್ಮ ಮನೆಯ ಬಳಿ ಬಂದಿದ್ದರು. ಪೋಲೀಸರು ನಮ್ಮನೆಲ್ಲಾ ವಿಚಾರಿಸಿ ಬರವಣಿಗೆ ಮಾಡಿಕೊಂಡರು. ಪೋಲೀಸರು ಬಂದಾಗ 02.00 ಗಂಟೆಯಾಗಿತ್ತು. ಆ ಸಂದರ್ಭದಲ್ಲಿ ನಾನು, ಪೋಲೀಸರು ಅಲ್ಲದೆ, ಬೇರೆಯವರು ಸಹ ಇದ್ದರು. ಸ್ಥಳ ಪಂಚನಾಮೆಯನ್ನು **ನಿಪಿ.2** ಎಂದು ಗುರುತಿಸಲಾಯಿತು (ಸ್ಥಳ ಪಂಚನಾಮೆಯಲ್ಲಿ ಈ ಸಾಕ್ಷಿಯ ಸಹಿ

ಇರುವುದಿಲ್ಲ)

**3.** ಆರೋಪಿತರು ನನ್ನ ಮಗಳನ್ನು ಚಿಕ್ಕಮಂಗಳೂರಿನಲ್ಲಿ ಕರೆದುಕೊಂಡು ಹೋಗಿ ಇಟ್ಟಿದ್ದರೆಂದು ಕೇಳಿ ಬಂದಿದ್ದು, ಪೋಲೀಸರು ನನ್ನನ್ನು ಚಿಕ್ಕಮಂಗಳೂರಿನಲ್ಲಿ ನನ್ನ ಮಗಳನ್ನು ಇರಿಸಿದ್ದ ಜಾಗಕ್ಕೆ ಕರೆದುಕೊಂಡು ಹೋದರು. ಸದರಿ ಸ್ಥಳವನ್ನು ಪರಿಶೀಲಿಸಿ ಬರವಣಿಗೆ ಮಾಡಿಕೊಂಡು ಸದರಿ ಬರವಣಿಗೆಗೆ ನನ್ನ ಸಹಿ ಪಡೆದರು. ನನ್ನೊಂದಿಗೆ ನನ್ನ ಮಗಳು ಸಹ ಇದ್ದಳು. ಪಂಚರಾಗಿ ಸ್ವಾಮಿ ಮತ್ತು ಸುಬ್ರಮಣಿ ಇದ್ದರು. ದಿನಾಂಕ 25.11.2016 ರಂದು ಚಿಕ್ಕಮಂಗಳೂರಿನಲ್ಲಿ ಬರೆದ ಸ್ಥಳ ಪಂಚನಾಮೆಯನ್ನು **ನಿಪಿ.3** ಎಂದು, ನಿಪಿ.3 ರಲ್ಲಿ ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ 4 ಪೋಟೋವನ್ನು ತೆಗೆದಿರುತ್ತಾರೆ. ಸದರಿ 4 ಪೋಟೋಗಳನ್ನು **ನಿಪಿ.4 ರಿಂದ ನಿಪಿ.7** ಎಂದು ಗುರುತಿಸಲಾಯಿತು.

**4.** 15 ದಿನಗಳ ನಂತರ ನನ್ನ ಮಗಳು ಸಿಕ್ಕಿರುತ್ತಾರೆ. ಆರೋಪಿತರೆ ನನ್ನನ್ನು ಮನೆಯಿಂದ ಕರೆದುಕೊಂಡು ಹೋಗಿರುತ್ತಾರೆಂದು ನನ್ನ ಮಗಳು ನನಗೆ ತಿಳಿಸಿದಳು. ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿ ನಂ.2 ಮತ್ತು 3 ರವರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ತಲೆಮರಿಸಿಕೊಂಡ ಆರೋಪಿ.1 ರವರನ್ನು ಗುರುತಿಸುತ್ತೇನೆಂದು ಹೇಳುತ್ತಾರೆ.

**ಪಾಟೀ ಸವಾಲು : ಶ್ರೀ ಇ.ಎಸ್.ಐ, ವಕೀಲರಿಂದ ಆರೋಪಿತರ ಪರವಾಗಿ** :

ಇ.ಎಸ್.ಐ. ವಕೀಲರು ಗೈರು ಹಾಜರಿದ್ದು, ಅವರ ಸಹದ್ಯೋಗಿ ವಕೀಲರು ಇ.ಎಸ್.ಐ. ವಕೀಲರು ಸಿ.ಜೆ.ಎಂ. ನ್ಯಾಯಾಲಯದಲ್ಲಿ ಇದ್ದಾರೆ ಎಂದು, ಅವರು ಬಂದು ಪಾಟೀ ಸವಾಲು ಮಾಡುತ್ತಾರೆಂದು ಸ್ವಲ್ಪ ಸಮಯದವರೆಗೆ ಈ ಪ್ರಕರಣವನ್ನು ಇಡಬೇಕೆಂದು ಕೇಳಿದ್ದರಿಂದ, ಈ ಪ್ರಕರಣವನ್ನು ಪಾಟೀ ಸವಾಲಿಗಾಗಿ (11.55 ಕ್ಕೆ) ಇಡಲಾಯಿತು.

ಪ್ರಕರಣವನ್ನು ಪುನಃ 12.35 ಕ್ಕೆ ಕರೆಸಲಾಗಿ, ಇ.ಎಸ್.ಐ. ವಕೀಲರು ಗೈರು ಹಾಜರಿದ್ದು, ಆರೋಪಿತರು ಇನ್ನೂ ತಮ್ಮ ವಕೀಲರು ಸಿ.ಜೆ.ಎಂ. ನ್ಯಾಯಾಲಯದಲ್ಲಿ ಇದ್ದಾರೆಂದು, ಇನ್ನೂ ಅರ್ಧ

ಗಂಟೆಯಾಗುತ್ತದೆಂದು ತಿಳಿಸಿದ್ದರಿಂದ, ಪ್ರಕರಣವನ್ನು ಪುನಃ ಇಡಲಾಯಿತು.

ಈ ಪ್ರಕರಣವನ್ನು ಪುನಃ 1.00 ಕರೆಸಲಾಗಿ, ಇ.ಎಸ್.ಐ. ವಕೀಲರ ಪರ ಅವರ ಸಹೋದ್ಯೋಗಿ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ, ರೂ.500/- ಖರ್ಚಿನೊಂದಿಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.